MVC 1211/2018
PW.2 (ಡಾ.ಎಲ್.ಎನ್.ಕರುಣಾಕರ)

ದಿನಾಂಕಃ **11-10-2022**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್.ಸಿ.ಎಸ್. ವಕೀಲರಿಂದಃ–**

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಇಂದು ತಂದಿರುವ ಅರ್ಜಿದಾರರಿಗೆ ಸಂಬಂಧಿಸಿದ ಒಳರೋಗಿ ಪೂರ್ತಿ ಕಡತವನ್ನು ನಿ.ಪಿ.13 ಎಂದು ಗುರುತಿಸಲಾಯಿತು. ಅರ್ಜಿದಾರರಿಗೆ ಸೇರಿದ ಒಟ್ಟು 6 ಕ್ಷ–ಕಿರಣಗಳನ್ನು ನಿ.ಪಿ.14 ಎಂದು, ಅರ್ಜಿದಾರರು ನನ್ನ ಬಳಿಗೆ ಚಿಕಿತ್ಸೆಗೆ ಬಂದಾಗ ಅಂಗನ್ಯೂನತೆಯ ಬಗ್ಗೆ ಲೆಕ್ಕ ಹಾಕಿರುವ ಕೇಸ್ ಶೀಟನ್ನು ನಿ.ಪಿ.15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ.ಕೆ.ಪಿ. ವಕೀಲರಿಂದಃ**

ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವ ಮುಂಚೆ ಮೈಸೂರಿನ ಜೆ.ಎಸ್.ಎಸ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬಂದಾಗ ಗಾಯದ ಹಿನ್ನೆಲೆಯನ್ನು ಅಪಘಾತದಿಂದಾಗಿದೆ ಎಂದು ಹೇಳಿರುತ್ತಾರೆ. ಯಾವ ವಾಹನದಿಂದ ಅಪಘಾತವಾಗಿದೆ ಎಂದು ಹೇಳಿಲ್ಲ ಎಂದರೆ ನಿಜ. ಅರ್ಜಿದಾರರಿಗೆ ಯಾವ ದಿನಾಂಕದಂದು ಅಪಘಾತವಾಗಿದೆ ಎಂದು ಗೊತ್ತಿಲ್ಲ. ಆದರೆ ಅವರು ನಮ್ಮ ಆಸ್ಪತ್ರೆಗೆ ದಿನಾಂಕ 10/12/2016 ರಂದು ಬಂದಿದ್ದರು. ಹಿಂದಿನ ಆಸ್ಪತ್ರೆಯವರು ಅರ್ಜಿದಾರರಿಗೆ ಪ್ರಥಮ ಚಿಕಿತ್ಸೆಯನ್ನು ಮಾತ್ರ ನೀಡಿರುತ್ತಾರೆ

ಅರ್ಜಿದಾರರಿಗೆ ಎಡತೊಡೆಯ ಮೂಳೆ ಮತ್ತು ಎಡಗೈನ ರೇಡಿಯಸ್ ಮೂಳೆ ಮುರಿದಿದ್ದವು. ಅದಲ್ಲದೇ ಅರ್ಜಿದಾರರಿಗೆ ತಲೆಗೆ ತರಚಿದ ಗಾಯಗಳು ಕಂಡುಬಂದವು. ಇವುಗಳನ್ನು ಹೊರತುಪಡಿಸಿ ಅರ್ಜಿದಾರರಿಗೆ ಬೇರೆ ಏನೆಲ್ಲಾ ಗಾಯಗಳಾಗಿದ್ದವು ಎಂದು ನಾನೇನೂ ಗಮನಿಸಿರುವುದಿಲ್ಲ. ಅರ್ಜಿದಾರರ ತೊಡೆಯ ಮೂಳೆಗೆ ಇಂಟರ್ ಲಾಕಿಂಗ್ ನೇಲ್ಸ್ ಗಳನ್ನು ಎಡಗೈ ಮೂಳೆಗೆ ಪ್ಲೇಟು ಮತ್ತು ಸ್ಕ್ರೂಗಳನ್ನು ಅಳವಡಿಸಿರುತ್ತೇನೆ. ಅರ್ಜಿದಾರರ ಕೊನೆಯ ಬಾರಿಗೆ ಚಿಕಿತ್ಸೆಗಾಗಿ ದಿನಾಂಕ 24/09/2022 ರಂದು ಬಂದಿರುತ್ತಾರೆ. ಕೊನೆಯ ಬಾರಿ ಬಂದಾಗ ನಾನು ಅವರ ಕ್ಷ-ಕಿರಣವನ್ನು ತೆಗೆದು ನೋಡಿರುತ್ತೇನೆ. ಅರ್ಜಿದಾರರಿಗೆ ಕ್ಷ-ಕಿರಣ ತೆಗೆದ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿಲ್ಲ ಎಂದರೆ ನಿಜ. ಆದರೆ ನಿ.ಪಿ.15 ರಲ್ಲಿ ನಮೂದು ಮಾಡಿರುತ್ತೇನೆ. ಅರ್ಜಿದಾರರು ಕೊನೆಯ ಬಾರಿ ನನ್ನ ಬಳಿ ಬಂದಾಗ ಎಡತೊಡೆ ಮತ್ತು ಎಡಗೈ ನೋವು ಇರುತ್ತದೆ ಎಂದು ಹೇಳಿರುತ್ತಾರೆ. ಅರ್ಜಿದಾರರು ನೀಡಿರುವ ಹೇಳಿಕೆಯ ಆಧಾರದ ಮೇಲೆ ನಾನು ಅಂಗನ್ಯೂನ್ಯತೆಯನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆದರೆ ನಾನು ಅವರ ಚಲನೆ ಮತ್ತು ಮಾಂಸಖಂಡಗಳ ಸಾಮರ್ಥ್ಯವನ್ನು ಪರೀಕ್ಷೆ ಮಾಡಿ ನ್ಯೂನ್ಯತೆಯನ್ನು ಹೇಳಿರುತ್ತೇನೆ. ನೋವು ಇರುವ ಬಗ್ಗೆ ಅರ್ಜಿದಾರರು ಹೇಳಿದ ಆಧಾರದ ಮೇಲೆ ಮಾತ್ರ ನಾನು ಅಂಗನ್ಯೂನ್ಯತೆಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಆಗಿದ್ದ ಮೂಳೆ ಮುರಿತ ಈಗ ಕೂಡಿಕೊಂಡಿದೆ ಎಂದರೆ ನಿಜ. ಮೂಳೆ ಎಲ್ಲಾ ಕೂಡಿಕೊಂಡಿದ್ದರಿಂದ ಅರ್ಜಿದಾರರು ಮಾಮೂಲಿನಂತೆ ಎಲ್ಲಾ ಕೆಲಸಗಳನ್ನು ಮಾಡಬಹುದಾಗಿದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ದೈಹಿಕ ಪರೀಕ್ಷೆಯನ್ನು ಮಾಡಿದ ಆಧಾರದ ಮೇಲೆ ಮತ್ತು 2018 ರಲ್ಲಿ ಕೇಂದ್ರ ಸರ್ಕಾರದವರು ಹೊರಡಿಸಿದ ಸುತ್ತೋಲೆಯ

ಆಧಾರದ ಮೇಲೆ ಅರ್ಜಿದಾರರಿಗೆ ಆಗಿರುವ ನ್ಯೂನ್ಯತೆಯನ್ನು ಹೇಳಿರುತ್ತೇನೆ. ಅರ್ಜಿದಾರರ ಎಡಕಾಲಿಗೆ ಶೇಕಡ 35 ರಷ್ಟು ಮತ್ತು ಎಡಕೈಗೆ ಶೇಕಡ 23 ರಷ್ಟು ಅಂಗನ್ಯೂನ್ಯತೆ ಇದೆ ಎಂದು ಅರ್ಜಿದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ಮೊದಲಿನಂತೆಯೇ ಎಲ್ಲಾ ಕೆಲಸ–ಕಾರ್ಯಗಳನ್ನು ಮಾಡುತ್ತಿದ್ದರೂ ಸಹ ಅವರಿಗೆ ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ವಿನಂತಿಸಿರುತ್ತಾರೆ. ವಿನಂತಿಯನ್ನು ಪುರಸ್ಕರಿಸಲಾಯಿತು.**

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.